ಸಾಕ್ಷಿ ಯನ್ನು ದಿಃ11.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ಗ್ರಾಮದಲ್ಲಿ ಪಂಚಾಯತಿ ಸೇರಿಸಿ ದಿನಾಂಕ ಯಾವುದು ಎಂದರೆ, 3 ವರ್ಷದ ಹಿಂದೆ ದೂರುದಾರರ ಮನೆಯ ಬಳಿ ಸೇರಿಸಿದ್ದೆವು. ಪಂಚಾಯತಿಗೆ ಸಿದ್ದಪ್ಪ ರವರು ಸೇರಿದ್ದರು. ಆ ದಿನ ಬರವಣಿಗೆ ಆಗಿಲ್ಲ.
2. ಆ ನಂತರ ದೂರುದಾರರ ವಿರುದ್ದ ದೂರು ನೀಡಿದ್ದೀರಾ ಎಂದರೆ, ಇಲ್ಲ.
3. ದೂರುದಾರರ ಬಳಿ ನೀವು 2 ಲಕ್ಷ ಹಣವನ್ನು ಪಡೆದುಕೊಂಡು ನಿಪಿ - 1ರ ಚೆಕ್ಕನ್ನು ನೀಡಿದ್ದೀರಾ ಎಂದರೆ ಸರಿಯಲ್ಲ. ಸದರಿ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹದೊಂದಿಗೆ ವಾಪಸಾಗಿದೆ ಎಂದರೆ ಸರಿಯಲ್ಲ.
4. ನೀವು ಉದ್ದೇಶಪೂರ್ವಕವಾಗಿ ದೂರುದಾರರಿಗೆ ಮೋಸ ಮಾಡಲು ನಿಪಿ - 1ರ ಚೆಕ್ ನೀಡಿದ್ದೀರಾ ಎಂದರೆ ಸರಿಯಲ್ಲ.
5. ದೂರುದಾರರಿಗೆ ಹಣವನ್ನು ವಾಪಸ್ ನೀಡಬೇಕಾಗುತ್ತದೆ ಎಂದು ಜಮೀನು ಸಲುವಾಗಿ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
6. ಸುಳ್ಳು ಅಂಶಗಳನ್ನು ಸೇರಿಸಿ ಪ್ರತ್ಯುತ್ತರ ನೀಡಿದ್ದೀರಾ ಎಂದರೆ ಸರಿಯಲ್ಲ.
7. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ.
8. ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ